ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಖಾಸಗೀಕರಣ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ ;

ಆ) ಈಗಾಗಲೇ ಎಷ್ಟು ಮಾರ್ಗಗಳನ್ನು ಖಾಸಗಿಯವರಿಗೆ ನೀಡಲಾಗಿದೆ, ಖಾಸಗಿಯವರಿಗೆ ನೀಡಲು ಕಾರಣಗಳೇನು ;

ಇ) ಪಿ.ಜಿ.ಆರ್. ಸಿಂಧ್ಯಾ ನೇತೃತ್ವದ ಸಮಿತಿಯ ವರದಿಯನ್ನು ಸರ್ಕಾರ ಒಪ್ಪಿದೆಯೇ, ಒಪ್ಪಿದ್ದರೆ ಇದನ್ನು ಯಾವಾಗ ಜಾರಿ ಮಾಡಲಾಗುವುದು?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಸಚಿವರು) :-

ಅ) ಇಲ್ಲ.

ಆ) ದಿನಾಂಕ 31-3-96 ಕ್ಕೆ ಅಂತ್ಯಗೊಂಡಂತೆ ಭಾಗಶಃ ರಾಷ್ಟ್ರೀಕೃತವಾಗಿರುವ 10 ಜಿಲ್ಲೆಗಳ ಮಾರ್ಗಗಳಲ್ಲಿ ಖಾಸಗಿಯವರು ಬಸ್ ಓಡಿಸಲು 4940 ಪರವಾನಿಗೆಗಳನ್ನು ನೀಡಲಾಗಿದೆ.

ಇ) ಸದರಿ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ :- ಸಾರಿಗೆ ಸಂಸ್ಥೆಯ ಟೈರ್ ಘಟಕದಲ್ಲಿ ಆಕಸ್ಮಿಕ ಬೆಂಕಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 907 (1537)

ಶ್ರೀ ಮಾಟಾಳ್ ನಾಗರಾಜ್ (ಚಾಮರಾಜನಗರ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಿನಾಂಕ 23-6-1996 ರಂದು ಸಾರಿಗೆ ಸಂಸ್ಥೆಯ ಟೈರು ಘಟಕದಲ್ಲಿ ಆಕಸ್ಮಿಕ ಬೆಂಕಿಯಿಂದ ಲಕ್ಷಾಂತರ ಟೈಯರುಗಳು ಸುಟ್ಟುಹೋಗಿರುವುದು ನಿಜವೆ?.

ಆ) ಹಾಗಿದ್ದಲ್ಲಿ ಲುಕ್ಸಾನಿನ ಪರಮಾವಧಿ ಮೊತ್ತ ಎಷ್ಟು ಹಾಗೂ ಈ ಆಕಸ್ಮಿಕಕ್ಕೆ ಕಾರಣಗಳು ಏನು?.

ಇ) ಈ ಘಟನೆಯ ಬಗ್ಗೆ ಯಾವ ರೀತಿಯ ವಿಚಾರಣೆ ಆದೇಶಿಸಲಾಗಿದೆ?.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) :-

ಅ) ದಿನಾಂಕ 22-6-1995 ರಂದು ಬೆಂಗಳೂರಿನ ಟೈರು ಘಟಕದಲ್ಲಿ ಆಕಸ್ಮಿಕ ಬೆಂಕಿ ಅನಾಹುತ ಸಂಭವಿಸಿದ್ದು ನಿಜ. ಅನಿರೀಕ್ಷಿತವಾಗಿ ಸಂಭವಿಸಿದ ಈ ಬೆಂಕಿ ಅನಾಹುತದಲ್ಲಿ ಟೈರುಗಳು ಹಾನಿಹೊಂದದೇ ಟೈರು ಘಟಕದ ಬಳಕೆ ಸಾಮಾಗ್ರಿಗಳು ಹಾನಿ ಹೊಂದಿರುತ್ತವೆ.

ಆ) ಸಂಸ್ಥರಣಾ ಸಾಮಾಗ್ರಿಗಳಾದ ಬಾಂಡಿಂಗ್ ಗಮ್, ಟ್ರೀಡ್ ರಬ್ಬರ್, ವಲ್ಕನೈಸಿಂಗ್ ಕಾಂಪೌಂಡ್ ಮತ್ತು ಎನ್‌ವಲಪ್‌ಗಳ ಹಾನಿಯಿಂದ ಅಂದಾಜು 10,33,562-35 ರೂಪಾಯಿಗಳಷ್ಟು ಹಾನಿ ಹೊಂದಿರುವುದಾಗಿ ವ್ಯಕ್ತವಾಗಿದೆ. ಈ ಪ್ರಕರಣ ಸಂಭವಿಸಿದ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಯುತ್ತಿದೆ.

ಇ) ನಿಗಮದ ಇಲಾಖಾ ವಿಚಾರಣೆಯು ತಾಂತ್ರಿಕ ಇಲಾಖೆಯ ಹಿರಿಯ ಅಧಿಕಾರಿಯವರ ನೇತೃತ್ವದಲ್ಲಿ ಹಾಗೂ ಟೈರು ಸಂಸ್ಥರಣಾ ವಿಭಾಗದಲ್ಲಿ ಅನುಭವವಿರುವ ಇಬ್ಬರು ತಾಂತ್ರಿಕ ಅಧಿಕಾರಿಗಳನ್ನು ನಿಗದಿ ಮಾಡಲಾಗಿದ್ದು ಈ ಆಕಸ್ಮಿಕ ಅನಾಹುತದ ಬಗ್ಗೆ ತನಿಖೆ ನಡೆಸಿ, ವರದಿ ನೀಡುವಂತೆ ಸೂಚಿಸಿ ಇನ್ನು ಮುಂದು ಈ ಬಗೆಯ ಅನಾಹುತ ನಡೆಯುದಂತೆ ಯಾವ ವಿಧವಾದ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳ ಬೇಕೆಂದು ಸಲಹೆ ನೀಡುವಂತೆ ಸೂಚಿಸಲಾಗಿದೆ.

ವಿಷಯ :- ರಾಜ್ಯದಲ್ಲಿ ವಸತಿ ರಹಿತರ ಸಮೀಕ್ಷೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 909 (1320)

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) :- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪ್ರತಿ ಜಿಲ್ಲೆಯಲ್ಲಿ ವಸತಿ ರಹಿತರ ಸಮೀಕ್ಷೆ ನಡೆಸಿರುವುದು ನಿಜವೇ? ಹಾಗಿದ್ದಲ್ಲಿ ಪ್ರತಿ ಜಿಲ್ಲೆಯಲ್ಲಿ ಎಷ್ಟು ಜನರನ್ನು ವಸತಿ ರಹಿತರೆಂದು ಗುರುತಿಸಲಾಗಿದೆ?

ಆ) ಶಿಕಾರಿಪುರ ತಾಲ್ಲೂಕಿನಲ್ಲಿ ಮನೆ ನಿವೇಶನ ಹಂಚಲು ಎಷ್ಟು ಗ್ರಾಮ ಗಳನ್ನು ಗುರುತಿಸಲಾಗಿದೆ ಎಷ್ಟು ಅರ್ಜಿಗಳನ್ನು ಪಡೆಯಲಾಗಿದೆ?

ಇ) ನಿವೇಶನ ರಚನೆ ಮಾಡಲು ಇದುವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಷ್ಟು ನಿವೇಶನ ರಚನೆ ಮಾಡಲಾಗಿದೆ. ಅವಶ್ಯವಿರುವ ಉಳಿಕೆ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :-

ಅ) ಸರ್ಕಾರದ ಆದೇಶ ಸಂಖ್ಯೆ : ವಸಇ 20 ಬಹೆಚ್‌ಎಸ್ 95 ದಿನಾಂಕ: 17-4-95 ರ ಮೇರೆಗೆ ಏಪ್ರಿಲ್ ಮಾಹೆಯಲ್ಲಿ ರಾಜ್ಯದಲ್ಲಿ ವಸತಿ ರಹಿತರ ನಿವೇಶನ ರಹಿತರ ಸರ್ವೇಕ್ಷಣೆ ಮಾಡಲಾಗಿದೆ. ಜಿಲ್ಲಾವಾರು ವಸತಿ ಹಾಗೂ ನಿವೇಶನ ರಹಿತರ ಪಟ್ಟಿಯನ್ನು ಲಗತ್ತಿಸಿದೆ.